KAMS610022912019

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿರವರ ನ್ಯಾಯಾಲಯ., ಪಿರಿಯಾಪಟ್ಟಣ.**

**ಉಪಸ್ಥಿತಿಃ**

**ಶ್ರೀಮತಿ. ಶ್ವೇತ.ಜೆ., ಬಿ.ಕಾಂ., ಎಲ್.ಎಲ್.ಬಿ.,**
**1 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಮ್.ಎಫ್.ಸಿ.,**
**ಪಿರಿಯಾಪಟ್ಟಣ.**

**ಸಿ.ಸಿ.ಸಂಖ್ಯೆ.839/2019**

ದಿನಾಂಕ 15 ನೇ ಏಪ್ರಿಲ್ ಮಾಹೆ 2026

**ಪಿರ್ಯಾದಿದಾರರು :** ಸರ್ಕಾರದ ಪರವಾಗಿ ಬೆಟ್ಟದಪುರ ಠಾಣಾ ಆರಕ್ಷಕರು
(ಸಹಾಯಕ ಸರ್ಕಾರಿ ಅಭಿಯೋಜಕರು)

**-ವಿರುದ್ದ-**

**ಆರೋಪಿಗಳು** :
1. ವೀರಭದ್ರಪ್ಪ ಬಿನ್ ಲೇಟ್ ವೀರಣ್ಣ,
(Abated)
2. ವೀರೇಂದ್ರ ಕುಮಾರ
ಬಿನ್ ವೀರಭದ್ರಪ್ಪ
ವಯಸ್ಸು 34 ವರ್ಷ,
ವಾಸ. ಪಾಕನಾಡ ಕೊಪ್ಪಲು ಗ್ರಾಮ,
ಪಿರಿಯಾಪಟ್ಟಣ ತಾಲ್ಲೂಕು.
ಮೈಸೂರು ಜಿಲ್ಲೆ.

(ಆರೋಪಿಗಳ ಪರ ಶ್ರೀ ಎಸ್ ಎಂ ಪಿ ., ವಕೀಲರು)

| | |
|---|---|
| ಪ್ರಕರಣ ಹೂಡಿದ ದಿನಾಂಕ | 03.05.2018 |
| ಕೃತ್ಯ ನಡೆದ ದಿನಾಂಕ | 03.05.2018 |
| ಪ್ರಥಮ ವರ್ತಮಾನ ಮಾಹಿತಿದಾರರ ಹೆಸರು | ಶ್ರೀ ವೇದಮೂರ್ತಿ |

| | |
|---|---|
| ಸಾಕ್ಷಿ ವಿಚಾರಣೆ ಪ್ರಾರಂಭವಾದ ದಿನಾಂಕ | 13.05.2024 |
| ಸಾಕ್ಷಿ ವಿಚಾರಣೆ ಮುಕ್ತಾಯವಾದ ದಿನಾಂಕ | 30.07.2025 |
| ತೀರ್ಪು ನೀಡಿದ ದಿನಾಂಕ | 15.04.2026 |
| ಆರೋಪಿಗಳ ವಿರುದ್ದ ಮಾಡಲಾದ ಆರೋಪ | ಭಾ.ದಂ.ಸಂ.ಕಲಂ. 323, 324, 341, 354, 504 ಮತ್ತು 506 ಸಹವಾಚಕ 34 |
| ನ್ಯಾಯಾಧೀಶರ ತೀರ್ಮಾನ | ಬಿಡುಗಡೆಗೊಳಿಸಲಾಯಿತು |
| ಪಿರ್ಯಾದುದಾರರನ್ನು ಪ್ರತಿನಿಧಿಸು ವಕೀಲರು | ಸ.ಸ.ಅ. |
| ಆರೋಪಿಯನ್ನು ಪ್ರತಿನಿಧಿಸುವ ವಕೀಲರು | ಶ್ರೀ ಎಸ್ ಎಂ ಪಿ ,ವಕೀಲರು |

**(ಶ್ವೇತ.ಜೆ)**
**1 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ.ದಂ.,**
**ಪಿರಿಯಾಪಟ್ಟಣ.**

## ತೀರ್ಪು

ಬೆಟ್ಟದಪುರ ಪೊಲೀಸ್ ಠಾಣಾ ಆರಕ್ಷಕ ನಿರೀಕ್ಷಕರು ಆರೋಪಿಗಳ ವಿರುದ್ದ ಭಾ.ದಂ.ಸಂ.ಕಲಂ.341, 324, 323, 354, 504 ಮತ್ತು 506 ಸಹವಾಚಕ 34 ರ ಅಡಿಯಲ್ಲಿ ದೋಷರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

**2. ಅಭಿಯೋಜನೆಯವರ ಪ್ರಕರಣದ ಸಾರಾಂಶ ಈ ಕೆಳಕಂಡಂತೆ ಇರುತ್ತದೆ:-**

ದಿನಾಂಕ 03.05.2018 ರಂದು ಬೆಳಿಗ್ಗೆ 8.30 ಗಂಟೆಯ ಸಮಯದಲ್ಲಿ ಬೆಟ್ಟದಪುರ ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ಪಾಕನಾಡಕೊಪ್ಪಲು ಗ್ರಾಮದ ಚಾಸಾ.1 ರವರು ಅನುಭವದಲ್ಲಿರುವ ಅವರ ಒಟ್ಟು ಕುಟುಂಬದ ಆಸ್ತಿ ಸರ್ವೆ ನಂ.75/4 ರ ಜಮೀನಿನಲ್ಲಿ ಚಾಸಾ.1 ಮತ್ತು 2 ರವರು ಜಮೀನು ಉಳುಮೆ ಮಾಡಲು ಹೋದಾಗ 1 ಮತ್ತು 2 ನೇ ಆರೋಪಿಗಳು ಚಾಸಾ.1 ಮತ್ತು 2 ರವರ

ಬಳಿ ಬಂದು ಜಮೀನು ತಕರಾರು ವಿಚಾರದಲ್ಲಿ ಈ ಜಮೀನು ನಮ್ಮದು ಉಳುಮೆ ಮಾಡಲು ಕೊಡುವುದಿಲ್ಲವೆಂದು ಜಗಳ ತೆಗೆದು 1 ನೇ ಆರೋಪಿಯು ಅಲ್ಲಿಯೇ ಬಿದ್ದಿದ್ದ ಒಂದು ದೊಣ್ಣೆಯಿಂದ ಚಾಸಾ.1 ರವರ ಎಡಗಾಲಿಗೆ ಹೊಡೆದಿದ್ದು, 2 ನೇ ಆರೋಪಿಯು ಅಲ್ಲೇ ಬಿದ್ದಿದ್ದ ಕಲ್ಲಿನಿಂದ ಚಾಸಾ.1 ರವರ ತಲೆಯ ಎಡಭಾಗಕ್ಕೆ ಹೊಡೆದಿದ್ದು, ಅದರಿಂದ ಚಾಸಾ.1 ರವರಿಗೆ ಸಾಮಾನ್ಯ ಸ್ವರೂಪದ ಗಾಯಗಳನ್ನುಂಟು ಮಾಡಿದ್ದು, ನಂತರ ಜಗಳ ಬಿಡಿಸಲು ಹೋದ ಚಾಸಾ.2 ರವರಿಗೆ 1 ನೇ ಆರೋಪಿಯು ಚಾಸಾ.2 ರವರ ತಲೆ ಕೂದಲನ್ನು ಹಿಡಿದು ಎಳೆದಾಡಿ ರವಿಕೆಯನ್ನು ಹಿಡಿದು ಎಳೆದು ಹರಿದು ಹಾಕಿ ಕೈಗಳಿಂದ ಚಾಸಾ.2 ರವರ ತಲೆಗೆ ಹೊಡೆದು ಅಪಮಾನ ಮಾಡಿ ಸಾಮಾನ್ಯ ಸ್ವರೂಪದ ನೋವುಂಟು ಮಾಡಿದ್ದು, ನಂತರ 1 ನೇ ಆರೋಪಿಯು ಸೂಳೆ ಮಕ್ಕಳ ಎಂದು ಬಾಯಿಗೆ ಬಂದಂತೆ ಅವಾಚ್ಯವಾಗಿ ಬೈಯ್ದು ನೀವು ಜಮೀನಿನ ಹತ್ತಿರ ಬಂದರೆ ನಿಮ್ಮನ್ನು ಕೊಲೆ ಮಾಡುತ್ತೇನೆಂದು ಕೊಲೆ ಬೆದರಿಕೆ ಹಾಕಿರುತ್ತಾರೆ.

**3.** ದಿನಾಂಕ 03.05.2018 ರಂದು ಚಾಸಾ.9-ಜಗದೀಶ ರವರು ಚಾಸಾ.1-ವೇದಮೂರ್ತಿ ರವರು ನೀಡಿದ ದೂರನ್ನು ಪಡೆದುಕೊಂಡು, ಠಾಣಾ ಅಪರಾಧ ಸಂಖ್ಯೆ:132/2018 ರಂತೆ ಭಾ.ದಂ.ಸಂ.ಕಲಂ. 341, 324, 323, 354, 504 ಮತ್ತು 506 ಸಹವಾಚಕ 34 ರ ಅಡಿಯಲ್ಲಿ ಪ್ರಕರಣವನ್ನು ದಾಖಲಿಸಿ, ತನಿಖೆ ಪೂರೈಸಿ, ಆರೋಪಿಗಳ ವಿರುದ್ದ ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿಯನ್ನು ಸಲ್ಲಿರುತ್ತಾರೆ.

**4.** ದೋಷರೋಪಣಾ ಪಟ್ಟಿಯನ್ನು ಸ್ವೀಕರಿಸಿ, ಆರೋಪಿಗಳು ಮಾಡಿದ ಅಪರಾಧಕ್ಕಾಗಿ ಭಾ.ದಂ.ಸಂ.ಕಲಂ. 341, 324, 323, 354, 504 ಮತ್ತು 506 ಸಹವಾಚಕ 34 ಗಳಿಗೆ ಸಂಜ್ಞೆಯನ್ನು ತೆಗೆದುಕೊಳ್ಳಲಾಯಿತು. ಆರೋಪಿಗಳು ವಕೀಲರನ್ನು ನೇಮಿಸಿಕೊಂಡು ಜಾಮೀನು ಪಡೆದುಕೊಂಡಿರುತ್ತಾರೆ. ಆರೋಪಿಗಳಿಗೆ ಅಭಿಯೋಜನೆಯವರ ದಾಖಲೆಗಳನ್ನು ದಂಡ ಪ್ರಕ್ರಿಯಾ ಸಂಹಿತೆ ಕಲಂ.207 ರಡಿಯಲ್ಲಿ ಪೂರೈಸಲಾಗಿರುತ್ತದೆ. ಆರೋಪಿಗಳ ಮೇಲೆ ಮಾಡಿದ ಆರೋಪಕ್ಕೆ ದೋಷಾರೋಪಣಾ ಪಟ್ಟಿಯನ್ನು ಭಾ.ದಂ.ಸಂ.ಕಲಂ.341, 324, 323, 354, 504 ಮತ್ತು 506 ಸಹವಾಚಕ 34 ರಂತೆ ರಚಿಸಿ ಓದಿ ಹೇಳಲಾಯಿತು. ಆರೋಪಿಗಳು ತಮ್ಮ ತಪ್ಪನ್ನು ಒಪ್ಪಿಕೊಳ್ಳದೆ ವಿಚಾರಣೆ ಆಗಬೇಕೆಂದು ಕೇಳಿದ ಕಾರಣ ಪ್ರಕರಣವನ್ನು ವಿಚಾರಣೆಗೆ ಮುಂದೂಡಲಾಯಿತು.

**5.** ಆರೋಪಿಗಳ ಮೇಲೆ ಮಾಡಿದ ಆರೋಪಣೆಯನ್ನು ಸಾಭೀತುಪಡಿಸಲು ಅಭಿಯೋಜನೆಯು ಚಾಸಾ-2 ರವರು ಗಾಯಾಳು ಆಗಿದ್ದು ಅವರನ್ನು ಪ್ರಾಸಾ.1 ರಂತೆ, ಚಾಸಾ-8 ರವರು ಪೊಲೀಸ್ ಅಧಿಕಾರಿ ಇದ್ದು ಅವರನ್ನು ಪ್ರಾಸಾ.2 ರಂತೆ, ಚಾಸಾ.3, ಚಾಸಾ.5 ಮತ್ತು ಚಾಸಾ.4 ರವರು ಪ್ರತ್ಯಕ್ಷ ಸಾಕ್ಷಿದಾರರಾಗಿದ್ದು ಅವರನ್ನು ಪ್ರಾಸಾ.3, ಪ್ರಾಸಾ.5 ಮತ್ತು ಪ್ರಾಸಾ.6 ರಂತೆ, ಮತ್ತು ಪ್ರಾಸಾ.7 ರವರು ವೈದ್ಯಾಧಿಕಾರಿಯಾಗಿದ್ದು ಅವರನ್ನು ಪ್ರಾಸಾ.7 ರಂತೆ ಸಾಕ್ಷಿಗೆ ಒಳಪಡಿಸಿ, ನಿಪಿ.1 ರಿಂದ 7 ಮತ್ತು ಮು ಮಾ-1 ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ. ನಂತರ ಮಾನ್ಯ ಅಭಿಯೋಜನೆಯ ಪರ ಸಾಕ್ಷ್ಯದಲ್ಲಿ ಆರೋಪಿತರಿಗೆ ವಿರುದ್ಧವಾದ ಸನ್ನಿವೇಶಗಳನ್ನು ಅವರಿಗೆ ಓದಿ ಹೇಳಿ, ಅವರು ನೀಡಿದ ಉತ್ತರಗಳನ್ನು ದಂಡ

ಪ್ರಕ್ರಿಯಾ ಸಂಹಿತೆ ಕಲಂ.313 ರ ಅಡಿಯಲ್ಲಿ ವಿಚಾರಣಾ ಕಾಲಕ್ಕೆ ನಮೂದಿಸಿಕೊಂಡಿರುತ್ತದೆ. ಆರೋಪಿತರು ತಮ್ಮ ಪರ ಯಾವುದೇ ಮೌಖಿಕ ಅಥವಾ ದಾಖಲೆಗಳು ಸಾಕ್ಷ್ಯವಿಲ್ಲವೆಂದು ನುಡಿದ ಕಾರಣ, ಅವರ ಪರ ಪ್ರತಿರಕ್ಷಾ ಸಾಕ್ಷ್ಯ ಇಲ್ಲವೆಂದು ಪರಿಗಣಿಸಿ, ವಾದ-ವಿವಾದಗಳನ್ನು ಕೇಳಿದ ನಂತರ, ಪ್ರಕರಣವನ್ನು ತೀರ್ಪಿಗೆಂದು ಕೈಗೆತ್ತಿಕೊಳ್ಳಲಾಯ್ತು.

**6.** ಉಭಯ ಪಕ್ಷಗಾರರ ಪರ ವಕೀಲರ ವಾದವನ್ನು ಕೇಳಲಾಯಿತು.

**7. ಈ ಕೆಳಕಂಡ ಅಂಶಗಳು ನನ್ನ ಪರಿಗಣನೆಗೆ ಉದ್ಭವಿಸಿರುತ್ತವೆ,**

**ಅಂಶಗಳು**

**1 ನೇ ಅಂಶ:** ದಿನಾಂಕ 03.05.2018 ರಂದು ಬೆಳಿಗ್ಗೆ 8.30 ಗಂಟೆಯ ಸಮಯದಲ್ಲಿ ಬೆಟ್ಟದಪುರ ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ಪಾಕನಾಡಕೊಪ್ಪಲು ಗ್ರಾಮದ ಚಾಸಾ.1 ರವರು ಅನುಭವದಲ್ಲಿರುವ ಅವರ ಒಟ್ಟು ಕುಟುಂಬದ ಆಸ್ತಿ ಸರ್ವೆ ನಂ.75/4 ರ ಜಮೀನಿನಲ್ಲಿ ಚಾಸಾ.1 ಮತ್ತು 2 ರವರು ಜಮೀನು ಉಳುಮೆ ಮಾಡಲು ಹೋದಾಗ 1 ಮತ್ತು 2 ನೇ ಆರೋಪಿಗಳು ಚಾಸಾ.1 ಮತ್ತು 2 ರವರ ಬಳಿ ಬಂದು ಜಮೀನು ತಕರಾರು ವಿಚಾರದಲ್ಲಿ ಈ ಜಮೀನು ನಮ್ಮದು ಉಳುಮೆ ಮಾಡಲು ಕೊಡುವುದಿಲ್ಲವೆಂದು ಜಗಳ ತೆಗೆದು 1 ನೇ ಆರೋಪಿಯು ಅಲ್ಲಿಯೇ ಬಿದ್ದಿದ್ದ ಒಂದು ದೊಣ್ಣೆಯಿಂದ ಚಾಸಾ.1 ರವರ ಎಡಗಾಲಿಗೆ ಹೊಡೆದಿದ್ದು, 2 ನೇ ಆರೋಪಿಯು ಅಲ್ಲೆ ಬಿದ್ದಿದ್ದ ಕಲ್ಲಿನಿಂದ ಚಾಸಾ.1 ರವರ ತಲೆಯ ಎಡಭಾಗಕ್ಕೆ ಹೊಡೆದಿದ್ದು, ಅದರಿಂದ ಚಾಸಾ.1 ರವರಿಗೆ ಸಾಮಾನ್ಯ ಸ್ವರೂಪದ ಗಾಯಗಳನ್ನುಂಟು ಮಾಡಿದ್ದು, ನಂತರ ಜಗಳ ಬಿಡಿಸಲು ಹೋದ ಚಾಸಾ.2 ರವರಿಗೆ 1 ನೇ ಆರೋಪಿಯು ಚಾಸಾ.2 ರವರ ತಲೆ ಕೂದಲನ್ನು ಹಿಡಿದು ಎಳೆದಾಡಿ ರವಿಕೆಯನ್ನು ಹಿಡಿದು ಎಳೆದು ಹರಿದು ಹಾಕಿ

ಕೈಗಳಿಂದ ಚಾಸಾ.2 ರವರ ತಲೆಗೆ ಹೊಡೆದು ಅಪಮಾನ ಮಾಡಿ ಸಾಮಾನ್ಯ ಸ್ವರೂಪದ ನೋವುಂಟು ಮಾಡಿದ್ದು, ನಂತರ 1 ನೇ ಆರೋಪಿಯು ಸೂಳೆ ಮಕ್ಕಳ ಎಂದು ಬಾಯಿಗೆ ಬಂದಂತೆ ಅವಾಚ್ಯವಾಗಿ ಬೈಯ್ದು ನೀವು ಜಮೀನಿನ ಹತ್ತಿರ ಬಂದರೆ ನಿಮ್ಮನ್ನು ಕೊಲೆ ಮಾಡುತ್ತೇನೆಂದು ಕೊಲೆ ಬೆದರಿಕೆ ಹಾಕಿರುತ್ತಾರೆ. ಆ ಮೂಲಕ ಆರೋಪಿಗಳು **ಭಾರತ ದಂಡ ಸಂಹಿತೆ ಕಲಂ.323, 324, 341, 354, 504 ಮತ್ತು 506 ಸಹವಾಚಕ ಕಲಂ 34 ರ** ಅಡಿಯಲ್ಲಿ ಅಪರಾಧ ಮಾಡಿದ್ದಾರೆಂದು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತುಪಡಿಸುವರೇ ?

**2 ನೇ ಅಂಶಃ** ಯಾವ ಆದೇಶ ?

**8.** ಮೇಲ್ಕಂಡ ಅಂಶಗಳಿಗೆ ಈ ಕೆಳಗಿನಂತೆ ಉತ್ತರಿಸಿರುತ್ತೇನೆ.

ಅಂಶ-1 : **"ನಕರಾತ್ಮಕವಾಗಿ"**

ಅಂಶ-2: ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಿಗಾಗಿ,

## ಕಾರಣಗಳು

**9. ಅಂಶ-1** : ಈ ಎಲ್ಲಾ ಅಂಶಗಳು ಒಂದಕ್ಕೊಂದು ಪೂರಕವಾಗಿರುವ ಕಾರಣ ಚರ್ಚಿಸಲು ಒಟ್ಟಿಗೆ ಕೈಗೆತ್ತಿಕೊಳ್ಳಲಾಯಿತು. ಅಭಿಯೋಗದವರ ವಾದದಂತೆ ದಿನಾಂಕ 03.05.2018 ರಂದು ಬೆಳಿಗ್ಗೆ 8.30 ಗಂಟೆಯ ಸಮಯದಲ್ಲಿ ಬೆಟ್ಟದಪುರ ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ಪಾಕನಾಡಕೊಪ್ಪಲು ಗ್ರಾಮದ ಚಾಸಾ.1 ರವರು ಅನುಭವದಲ್ಲಿರುವ ಅವರ ಒಟ್ಟು ಕುಟುಂಬದ ಆಸ್ತಿ ಸರ್ವೆ ನಂ.75/4 ರ ಜಮೀನಿನಲ್ಲಿ ಚಾಸಾ.1 ಮತ್ತು 2 ರವರು ಜಮೀನು ಉಳುಮೆ

ಮಾಡಲು ಹೋದಾಗ 1 ಮತ್ತು 2 ನೇ ಆರೋಪಿಗಳು ಚಾಸಾ.1 ಮತ್ತು 2 ರವರ ಬಳಿ ಬಂದು ಜಮೀನು ತಕರಾರು ವಿಚಾರದಲ್ಲಿ ಈ ಜಮೀನು ನಮ್ಮದು ಉಳುಮೆ ಮಾಡಲು ಕೊಡುವುದಿಲ್ಲವೆಂದು ಜಗಳ ತೆಗೆದು 1 ನೇ ಆರೋಪಿಯು ಅಲ್ಲಿಯೇ ಬಿದ್ದಿದ್ದ ಒಂದು ದೊಣ್ಣೆಯಿಂದ ಚಾಸಾ.1 ರವರ ಎಡಗಾಲಿಗೆ ಹೊಡೆದಿದ್ದು, 2 ನೇ ಆರೋಪಿಯು ಅಲ್ಲೆ ಬಿದ್ದಿದ್ದ ಕಲ್ಲಿನಿಂದ ಚಾಸಾ.1 ರವರ ತಲೆಯ ಎಡಭಾಗಕ್ಕೆ ಹೊಡೆದಿದ್ದು, ಅದರಿಂದ ಚಾಸಾ.1 ರವರಿಗೆ ಸಾಮಾನ್ಯ ಸ್ವರೂಪದ ಗಾಯಗಳನ್ನುಂಟು ಮಾಡಿದ್ದು, ನಂತರ ಜಗಳ ಬಿಡಿಸಲು ಹೋದ ಚಾಸಾ.2 ರವರಿಗೆ 1 ನೇ ಆರೋಪಿಯು ಚಾಸಾ.2 ರವರ ತಲೆ ಕೂದಲನ್ನು ಹಿಡಿದು ಎಳೆದಾಡಿ ರವಿಕೆಯನ್ನು ಹಿಡಿದು ಎಳೆದು ಹರಿದು ಹಾಕಿ ಕೈಗಳಿಂದ ಚಾಸಾ.2 ರವರ ತಲೆಗೆ ಹೊಡೆದು ಅಪಮಾನ ಮಾಡಿ ಸಾಮಾನ್ಯ ಸ್ವರೂಪದ ನೋವುಂಟು ಮಾಡಿದ್ದು, ನಂತರ 1 ನೇ ಆರೋಪಿಯು ಸೂಳೆ ಮಕ್ಕಳ ಎಂದು ಬಾಯಿಗೆ ಬಂದಂತೆ ಅವಾಚ್ಯವಾಗಿ ಬೈಯ್ದು ನೀವು ಜಮೀನಿನ ಹತ್ತಿರ ಬಂದರೆ ನಿಮ್ಮನ್ನು ಕೊಲೆ ಮಾಡುತ್ತೇನೆಂದು ಕೊಲೆ ಬೆದರಿಕೆ ಹಾಕಿರುತ್ತಾರೆ ಎಂದು ಅಭಿಯೋಗದವರು ವಾದ ಮಂಡಿಸಿರುತ್ತಾರೆ.

**10.** ಅಭಿಯೋಜಕರು ಆರೋಪಣೆಯನ್ನು ಸಾಬೀತುಪಡಿಸಲು ಈ ಪ್ರಕರಣದ ಚಾಸಾ.2-ಸಣ್ಣಮ್ಮ ಗಾಯಾಳು ಆಗಿದ್ದು, ಇವರನ್ನು ಪ್ರಾಸಾ.1 ಎಂದು ಸಾಕ್ಷಿ ವಿಚಾರಣೆ ಮಾಡಿಸಿದ್ದು, ಇವರು ತಮ್ಮ ಸಾಕ್ಷ್ಯದಲ್ಲಿ 2 ನೇ ಆರೋಪಿತ ತನ್ನ ಭಾವನ ಮಗನಿದ್ದು, ಮೃತ 1 ನೇ ಆರೋಪಿತ ತನ್ನ ಭಾವ. ಮೃತ ಚಾಸಾ-1 ರವರು ತನ್ನ ಗಂಡನಿದ್ದು, ತನಗೆ ಚಾಸಾ-3 ರಿಂದ 5 ರವರ ಪರಿಚಯ ಇದ್ದು, ಅವರು

ತಮ್ಮ ಗ್ರಾಮಸ್ಥರಿದ್ದು, ತನಗೆ ಈ ಪ್ರಕರಣದ ಬಗ್ಗೆ ಏನೂ ಗೊತ್ತಿಲ್ಲ. ಆರೋಪಿತರು ಯಾವತ್ತೂ ಸಹ ತಮ್ಮೊಂದಿಗೆ ಜಗಳ ಮಾಡಿಲ್ಲ, ಮುಂದೆ ಹೋಗದಂತೆ ತಡೆಯುಂಟು ಮಾಡಿಲ್ಲ, ದೊಣ್ಣೆಯಿಂದ ಮತ್ತು ಕೈಗಳಿಂದ ಹಲ್ಲೆ ಮಾಡಿಲ್ಲ, ಅವಮಾನ ಮಾಡಿಲ್ಲ, ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ ಮತ್ತು ಕೊಲೆ ಬೆದರಿಕೆ ಹಾಕಿರುವುದಿಲ್ಲ ಹಾಗೂ ಈ ಸಂಬಂಧ ಚಾಸಾ-1 ರವರು ಆರೋಪಿತರ ವಿರುದ್ಧ ಯಾವುದೇ ದೂರು ನೀಡಿರುವುದಿಲ್ಲ. ತಾನು ಪೊಲೀಸರ ಮುಂದೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ. ಸ್ಥಳ ಮಹಜರ್ ಕಾಲಕ್ಕೆ ತಾನು ಹಾಜರಿರಲಿಲ್ಲ ಮತ್ತು ಪೊಲೀಸರು ತನ್ನ ಸಮಕ್ಷಮ ಯಾವುದೇ ವಸ್ತುವನ್ನು ಅಮಾನತ್ತು ಪಡಿಸಿಕೊಂಡಿಲ್ಲ. ಸ್ಥಳ ಮಹಜರ್ ನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಸಹಿಯನ್ನು ತಾನು ಖಾಲಿ ಹಾಳೆಯ ಮೇಲೆ ಪೊಲೀಸರ ಒತ್ತಾಯಕ್ಕೆ ಹಾಕಿದ್ದು, ತಾನು ನ್ಯಾಯಾಧೀಶರ ಮುಂದೆ ಪೊಲೀಸರ ಒತ್ತಾಯದ ಮೇರೆಗೆ ಹೇಳಿಕೆ ನೀಡಿರುವುದಾಗಿ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿದಿರುತ್ತಾರೆ. ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಮಾಡಿದ ಪಾಟೀ ಸವಾಲಿನಲ್ಲಿ ತಾವು ಆರೋಪಿತರೊಂದಿಗೆ ರಾಜಿ ಮಾಡಿಕೊಂಡಿರುವುದಾಗಿ ನುಡಿದಿರುತ್ತಾರೆ. ಉಳಿದಂತೆ ಸೂಚಿಸಿದ ಎಲ್ಲಾ ಸೂಚನೆಗಳನ್ನು ಅಲ್ಲಗಳೆದಿರುತ್ತಾರೆ.

**11.** ಚಾಸಾ.8/ಪ್ರಾಸಾ.2- ರಾಜೇಶ್ ಕುಮಾರ್ ರವರು ಮುಖ್ಯ ಪೇದೆಯಾಗಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕ: 03/05/2018 ರಂದು ತಾನು ಹಗಲು ಕರ್ತವ್ಯದಲ್ಲಿದ್ದಾಗ ಚಾಸಾ-9 ರವರು ಪಿರಿಯಾಪಟ್ಟಣ ಸರ್ಕಾರಿ ಆಸ್ಪತ್ರೆಯಿಂದ ಬಂದ ಮೆಮೋ ವಿಚಾರವಾಗಿ ಆಸ್ಪತ್ರೆಗೆ

ಹೋಗಿ ಗಾಯಾಳುವಿನ ಹೇಳಿಕೆ ಪಡೆಯಲು ಸೂಚಿಸಿದ್ದು, ಅದರಂತೆ ತಾನು ಆಸ್ಪತ್ರೆಗೆ ಬೇಟಿ ನೀಡಿ ಚಾಸಾ-1 ರವರ ಹೇಳಿಕೆಯನ್ನು ತಾನೇ ಬರೆದುಕೊಂಡು, ನಂತರ ಸದರಿ ಹೇಳಿಕೆಯನ್ನು ಠಾಣೆಗೆ ತಂದು ಚಾಸಾ-9 ರವರಿಗೆ ನೀಡಿರುವುದಾಗಿ ಹಾಗೂ ಹೇಳಿಕೆ ದೂರಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುವುದಾಗಿ ಸಾಕ್ಷಿ ನುಡಿದಿರುತ್ತಾರೆ.

**12.** ಆರೋಪಿಗಳ ಪರ ವಕೀಲರು ಮಾಡಿದ ಪಾಟೀ ಸವಾಲಿನಲ್ಲಿ ಚಾಸಾ-9 ರವರಿಗೆ ಆಸ್ಪತ್ರೆಯಿಂದ ಯಾವುದೇ ಮೇಮೋ ಬಂದಿರುವುದಿಲ್ಲ, ಅದರ ಆಧಾರದ ಮೇರೆಗೆ ತಾನು ಆಸ್ಪತ್ರೆಗೆ ಬೇಟಿ ನೀಡಿಲ್ಲ, ತಾನು ಗಾಯಾಳುವಿನ ಹೇಳಿಕೆ ಬರೆದುಕೊಂಡಿಲ್ಲ, ತಾನು ಆ ದಿನ ಕರ್ತವ್ಯಕ್ಕೆ ಹಾಜರಾದ ಬಗ್ಗೆ ದಾಖಲಾತಿ ಹಾಜರುಪಡಿಸಿಲ್ಲ. ತನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ಅಂಶಗಳು ಸುಳ್ಳು ಎಂಬುದನ್ನು ಅಲ್ಲಗಳೆದಿರುತ್ತಾರೆ.

**13.** ಚಾಸಾ.6/ಪ್ರಾಸಾ.4-ಮಹದೇವ ಇವರು ಮಹಜರ್ ಸಾಕ್ಷಿಯಾಗಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ತನಗೆ ಈ ಪ್ರಕರಣದ ಬಗ್ಗೆ ಏನೂ ಗೊತ್ತಿಲ್ಲ. ಸ್ಥಳ ಮಹಜರ್ ಕಾಲಕ್ಕೆ ತಾನು ಹಾಜರಿರಲಿಲ್ಲ ಮತ್ತು ಪೊಲೀಸರು ತನ್ನ ಸಮಕ್ಷಮ ಯಾವುದೇ ವಸ್ತುವನ್ನು ಅಮಾನತ್ತು ಪಡಿಸಿಕೊಂಡಿಲ್ಲ ಮತ್ತು ಸಾಕ್ಷಿಯು ನಿಪಿ.1-ಸ್ಥಳ ಮಹಜರ್ ನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಸಹಿಯನ್ನು ತಾನು ಖಾಲಿ ಹಾಳೆಯ ಮೇಲೆ ಪೊಲೀಸರ ಒತ್ತಾಯಕ್ಕೆ ಹಾಕಿರುತ್ತೇನೆ ಎಂದು ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿದಿರುತ್ತಾರೆ. ಅಭಿಯೋಜನೆಯು ಪ್ರಾಸಾ-4 ರವರನ್ನು ಪಾಟೀ

ಸವಾಲು ಮಾಡಿದರೂ, ಪ್ರಕರಣವನ್ನು ಬೆಂಬಲಿಸುವಂತಹ ಯಾವುದೇ ಅಂಶಗಳನ್ನು ಹೊರತರಿಸುವಲ್ಲಿ ವಿಫಲಗೊಂಡಿದೆ.

**14.** ಚಾಸಾ.3/ಪ್ರಾಸಾ.3-ಶಿವಪ್ಪ ಇವರು ಪ್ರತ್ಯಕ್ಷ ಸಾಕ್ಷಿಯಾಗಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ತನಗೆ ಆರೋಪಿತರು ಗೊತ್ತು. ತನಗೆ ಚಾಸಾ-1 ಮತ್ತು 2 ಗೊತ್ತು, ತನಗೆ ಈ ಪ್ರಕರಣದ ಬಗ್ಗೆ ಏನೂ ಗೊತ್ತಿಲ್ಲ, ಆರೋಪಿತರು ಯಾವತ್ತೂ ಸಹ ಚಾಸಾ-1 ಮತ್ತು 2 ರವರೊಂದಿಗೆ ಜಗಳ ಮಾಡಿಲ್ಲ, ಮುಂದೆ ಹೋಗದಂತೆ ತಡೆಯುಂಟು ಮಾಡಿಲ್ಲ, ದೊಣ್ಣೆಯಿಂದ ಮತ್ತು ಕೈಗಳಿಂದ ಹಲ್ಲೆ ಮಾಡಿಲ್ಲ, ಅವಮಾನ ಮಾಡಿಲ್ಲ, ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ ಮತ್ತು ಕೊಲೆ ಬೆದರಿಕೆ ಹಾಕಿರುವುದಿಲ್ಲ. ತಾನು ಘಟನೆಯನ್ನು ಪ್ರತ್ಯಕ್ಷವಾಗಿ ನೋಡಿಲ್ಲ. ಸ್ಥಳ ಮಹಜರ್ ಕಾಲಕ್ಕೆ ತಾನು ಹಾಜರಿರಲಿಲ್ಲ ಮತ್ತು ಪೊಲೀಸರು ತನ್ನ ಸಮಕ್ಷಮ ಯಾವುದೇ ವಸ್ತುವನ್ನು ಅಮಾನತ್ತು ಪಡಿಸಿಕೊಂಡಿಲ್ಲ ಎಂದು ನಿಪಿ.1-ಸ್ಥಳ ಮಹಜರ್ ನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಸಹಿಯನ್ನು ತಾನು ಖಾಲಿ ಹಾಳೆಯ ಮೇಲೆ ಪೊಲೀಸರ ಒತ್ತಾಯಕ್ಕೆ ಹಾಕಿರುತ್ತೇನೆ ಎಂದು ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿದಿರುತ್ತಾರೆ. ಅಭಿಯೋಜನೆಯು ಪ್ರಾಸಾ-3 ರವರನ್ನು ಪಾಟೀ ಸವಾಲು ಮಾಡಿದರೂ, ಪ್ರಕರಣವನ್ನು ಬೆಂಬಲಿಸುವಂತಹ ಯಾವುದೇ ಅಂಶಗಳನ್ನು ಹೊರತರಿಸುವಲ್ಲಿ ವಿಫಲಗೊಂಡಿದೆ.

**15.** ಪ್ರತ್ಯಕ್ಷ ಸಾಕ್ಷಿದಾರರಾದ ಚಾಸಾ.5/ಪ್ರಾಸಾ.5-ಚಿಕ್ಕೇಗೌಡ ಮತ್ತು ಚಾಸಾ.4/ಪ್ರಾಸಾ.6- ಪುಟ್ಟರಾಜು ರವರನ್ನು ಸಾಕ್ಷಿಗೆ ಒಳಪಡಿಸಿರುತ್ತಾರೆ. ಸದರಿಯವರು ತಮ್ಮ ಸಾಕ್ಷ್ಯದಲ್ಲಿ ಆರೋಪಿತರು ಗೊತ್ತು, ತಮಗೆ ಚಾಸಾ.1 ಮತ್ತು 2

ರವರು ಗೊತ್ತು, ಈ ಪ್ರಕರಣದ ಬಗ್ಗೆ ಏನು ಗೊತ್ತಿಲ್ಲ, ತಾವು ಘಟನೆಯನ್ನು ಪ್ರತ್ಯಕ್ಷವಾಗಿ ನೋಡಿಲ್ಲ. ಯಾವುದೇ ಹೇಳಿಕೆ ನೀಡಿಲ್ಲವೆಂದು ಎಂದು ವ್ಯತಿರಿಕ್ತವಾಗಿ ಸಾಕ್ಷಿ ನುಡಿದಿರುತ್ತಾರೆ. ಅಭಿಯೋಜನೆಯು ಪ್ರಾಸಾ-5 ಮತ್ತು ಪ್ರಾಸಾ.6 ರವರನ್ನು ಪಾಟೀ ಸವಾಲು ಮಾಡಿದರೂ, ಪ್ರಕರಣವನ್ನು ಬೆಂಬಲಿಸುವಂತಹ ಯಾವುದೇ ಅಂಶಗಳನ್ನು ಹೊರತರಿಸುವಲ್ಲಿ ಅಭಿಯೋಜನೆಯು ವಿಫಲಗೊಂಡಿದೆ.

16. **ಚಾಸಾ.7/ ಪ್ರಾಸಾ.7- ಡಾ.ಸದಾಶಿವ** ರವರು ವೈದ್ಯಾಧಿಕಾರಿ ಆಗಿದ್ದು, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ಈ ಪ್ರಕರಣಕ್ಕೆ ಸಂಬಂಧಿಸಿದಂತೆ ದಿನಾಂಕಃ 03.05.2018 ರಂದು ಬೆಳಗ್ಗೆ 10.20 ಗಂಟೆ ಸಮಯದಲ್ಲಿ ಚಾಸಾ-1 ವೇದ ಮೂರ್ತಿ ಎಂಬುವವರು, ಅದೇ ದಿನ ಬೆಳಿಗ್ಗೆ 9.00 ಗಂಟೆಗೆ ಪಾಕನಾಡು ಕೊಪ್ಪಲು ಗ್ರಾಮದಲ್ಲಿ ವೀರಭದ್ರಪ್ಪ ಮತ್ತು ವಿರೇಂದ್ರ ಕುಮಾರ ರವರು ಕಲ್ಲಿನಿಂದ ಮತ್ತು ಮರದ ದೊಣ್ಣೆಯಿಂದ ಹಲ್ಲೆ ಮಾಡಿರುತ್ತಾರೆಂದು ಅವರ ಪತ್ನಿ ಸಣ್ಣಮ್ಮ ರವರೊಂದಿಗೆ ಚಿಕಿತ್ಸೆಗೋಸ್ಕರ ತನ್ನ ಮುಂದೆ ಹಾಜರಾಗಿದ್ದರು, ಅವರನ್ನು ಪರೀಕ್ಷಿಸಲಾಗಿ ತಲೆಯ ಎಡಭಾಗದ ಹಿಂಭಾಗದಲ್ಲಿ 2 x 1 ಸೆಂ ಮೀ ಅಳತೆಯ ತರಚಿದ ಗಾಯ ಮತ್ತು ಎಡ ಬೆನ್ನಿನ ಮೇಲ್ಭಾಗದಲ್ಲಿ 8 x 5 ಸೆಂ ಮೀ ಅಳತೆಯ ಊತದ ಗಾಯವಾಗಿದ್ದು, ಸದರಿ ಗಾಯಗಳು ಸಾದಾರಣ ಸ್ವರೂಪದ ಗಾಯಗಳೆಂದು ಅಭಿಪ್ರಾಯಪಟ್ಟು ನಿಪಿ.7 ರ ಪ್ರಕಾರ ಗಾಯದ ಪ್ರಮಾಣ ಪತ್ರವನ್ನು ನೀಡಿದ್ದು, ನ್ಯಾಯಾಲಯದ ಮುಂದಿರುವ ಕಲ್ಲು ಮತ್ತು ದೊಣ್ಣೆಯಿಂದ ಹಲ್ಲೆ ಮಾಡಿದರೆ ನಿಪಿ-7 ರಲ್ಲಿ ಕಾಣಿಸಿರುವ ಗಾಯಗಳು ಆಗುವ ಸಂಭವ ಇರುತ್ತದೆ ಎಂದು ನುಡಿದಿರುತ್ತಾರೆ. ಆರೋಪಿ ಪರ ವಕೀಲರು ಮಾಡಿದ ಪಾಟೀ ಸವಾಲಿನಲ್ಲಿ

ಮೇಲ್ಕಂಡ ಗಾಯಗಳು ಬೈಕಿನಲ್ಲಿ ಹೋಗುವಾಗ ಬಿದ್ದರೆ ಆಗುವಂತಹ ಸಾಧ್ಯತೆ ಇರುತ್ತದೆ ಎಂದು ನುಡಿದಿರುತ್ತಾರೆ.

**17.** ಅಭಿಯೋಜನೆಯ ಪರ ಹಾಜರುಪಡಿಸಲಾದ ಸಾಕ್ಷ್ಯಾದಾರಗಳನ್ನು ಸೂಕ್ಷ್ಮವಾಗಿ ವಿಶ್ಲೇಷಿಸಿ ನೋಡಿದಾಗ, ಚಾಸಾ.1 ರವರು ಈ ಪ್ರಕರಣದ ದೂರುದಾರರಾಗಿದ್ದು, ವಿಚಾರಣೆಗೆ ಒಳಪಡಿಸುವ ಹಂತದಲ್ಲಿ ಸದರಿಯವರು ಮೃತಗೊಂಡಿರುವ ಬಗ್ಗೆ ವರದಿ ಸಲ್ಲಿಸಿರುತ್ತಾರೆ. ಹಲ್ಲೆಯ ಸಮಯದಲ್ಲಿ ಹಾಜರಾಗಿದ್ದ ಇನ್ನೊಬ್ಬ ಗಾಯಾಳು ಅಂದರೆ ಚಾಸಾ.1 ರವರ ಧರ್ಮಪತ್ನಿಯಾದ ಚಾಸಾ.2 ರವರನ್ನು ಪ್ರಾಸಾ.1 ರವರನ್ನಾಗಿ ವಿಚಾರಣೆಗೆ ಒಳಪಡಿಸಿದಾಗ ಆಕೆ ಘಟನೆಯ ಬಗ್ಗೆ ಮತ್ತು ಆರೋಪಿತರು ತನ್ನ ಮತ್ತು ತನ್ನ ಗಂಡ /ಚಾಸಾ.1 ರವರ ಮೇಲೆ ಮಾಡಿದಂತಹ ಹಲ್ಲೆಯಾಗಲಿ ಹಾಗೂ ತಮಗೆ ನಿಂದಿಸಿದ ಬಗ್ಗೆ ಮತ್ತು ಕೊಲೆ ಬೆದರಿಕೆ ಹಾಕಿದ ಬಗ್ಗೆ ಯಾವುದೇ ಪೂರಕ ಸಾಕ್ಷ್ಯವನ್ನು ನುಡಿದಿರುವುದಿಲ್ಲ. ಪ್ರಾಸಾ.2 ರವರು ಚಾಸಾ.1 ರವರ ಹೇಳಿಕೆಯನ್ನು ಆಸ್ಪತ್ರೆಯಲ್ಲಿ ಬರೆದುಕೊಂಡಿದ್ದರೂ ಸಹ ಚಾಸಾ.7/ಪ್ರಾಸಾ.7 ವೈದ್ಯಾಧಿಕಾರಿಯವರು ತಮ್ಮ ಮುಂದೆ ಹೇಳಿಕೆ ಪಡೆದಿರುವುದಾಗಲೀ ಅಥವಾ ಹೇಳಿಕೆ ಪಡೆಯುವ ಮುನ್ನ ಚಾಸಾ.1 ರವರು ಹೇಳಿಕೆ ಕೊಡುವ ಸ್ಥಿತಿಯಲ್ಲಿ ಇದ್ದರು ಎಂಬ ಬಗ್ಗೆ ದೃಡೀಕರಿಸಿರುವುದಿಲ್ಲ. ಚಾಸಾ.1 ರವರು ನೀಡಿರುವ ಹೇಳಿಕೆಗೆ ಪೂರಕವಾಗಿ ಪ್ರತ್ಯಕ್ಷ ಸಾಕ್ಷಿದಾರರಾಗಲೀ ಸ್ವತಃ ಚಾಸಾ.2/ಹೆಂಡತಿಯಾಗಲಿ ಸಾಕ್ಷ್ಯವನ್ನು ನುಡಿದಿರುವುದಿಲ್ಲ. ಮಹಜರ್ ಸಾಕ್ಷಿದಾರರು ಸಹ ಪೂರಕವಾದ ಸಾಕ್ಷ್ಯ ನುಡಿಯದ ಕಾರಣ ಸ್ಥಳದಿಂದ ಕಲ್ಲು ಮತ್ತು ದೊಣ್ಣೆಯನ್ನು ಅಮಾನತು ಪಡಿಸಿಕೊಂಡ ಬಗ್ಗೆ ನಿಸ್ಸಂಶಯತೀತ ಸಾಕ್ಷ್ಯದಾರಗಳು ಒದಗಿ

ಬಂದಿರುವುದಿಲ್ಲ. ಈ ಪ್ರಕರಣದ ಮುಖ್ಯ ತನಿಖಾಧಿಕಾರಿ ನ್ಯಾಯಾಲಯದ ಮುಂದೆ ತಾನು ಕೈಗೊಂಡಂತಹ ತನಿಖೆಯನ್ನು ನುಡಿಯದೇ ಇದ್ದುದ್ದರಿಂದ ಆರೋಪಿತರು ಅಪರಾಧ ಎಸಗಿದ್ದಾರೆಂದು ರುಜುವಾತುಪಡಿಸಿರುವುದಿಲ್ಲ. ಈ ಎಲ್ಲಾ ಕಾರಣಗಳಿಂದ ಅಭಿಯೋಜನೆಯು ತಮ್ಮ ಪ್ರಕರಣವನ್ನು ನಿಸ್ಸಂಶಯಾತೀತವಾಗಿ ರುಜುವಾತುಪಡಿಸಲು ವಿಫಲವಾಗಿದೆ ಎಂದು ಪರಿಗಣಿಸಿ 2 ನೇ ಆರೋಪಿತನನ್ನು ಶಿಕ್ಷಿಸುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ನಿರ್ಧರಿಸಿ, ಮೇಲ್ಕಂಡ **1** ನೇ ಅಂಶವನ್ನು **ನಕಾರಾತ್ಮಕವಾಗಿ** ಉತ್ತರಿಸಿರುತ್ತೇನೆ.

**18. ಅಂಶ-2:** ಅಂಶ-1 ರಲ್ಲಿ ವಿವರಿಸಿದ ಕಾರಣದಿಂದ ಅಭಿಯೋಜನೆಯವರು 2 ನೇ ಆರೋಪಿಯ ಮೇಲೆ ಮಾಡಿದ ಆರೋಪಣೆಯನ್ನು ಸಾಬೀತು ಮಾಡಲು ವಿಫಲರಾಗಿರುತ್ತಾರೆಂದು ತೀರ್ಮಾನಿಸುತ್ತಾ ಈ ಕೆಳಗಿನಂತೆ ಆದೇಶ ಮಾಡಲಾಗಿದೆ.

## ಆದೇಶ

ದಂಡ ಪ್ರಕ್ರಿಯಾ ಸಂಹಿತೆ ಕಲಂ.248(1)ರಡಿ 2 ನೇ ಆರೋಪಿಯನ್ನು ಭಾರತ ದಂಡ ಸಂಹಿತೆ ಕಲಂ.323, 324, 341, 354, 504 ಮತ್ತು 506 ಸಹವಾಚಕ 34 ಅಡಿಯಲ್ಲಿ ಶಿಕ್ಷಾರ್ಹ ಆರೋಪದಿಂದ ದೋಷಮುಕ್ತರೆಂದು ಪರಿಗಣಿಸಿ ಬಿಡುಗಡೆ ಮಾಡಲಾಗಿದೆ.

1 ನೇ ಆರೋಪಿತನನ್ನು ಈ ಪ್ರಕರಣದಿಂದ abate ಮಾಡಲಾಗಿದೆ.

ದಂಡ ಪ್ರಕ್ರಿಯ ಸಂಹಿತೆ ಕಲಂ.437(ಎ)ರಂತೆ 2 ನೇ ಆರೋಪಿ ಮತ್ತು ಜಾಮೀನುದಾರರ ಮುಚ್ಚಳಿಕೆ ಪತ್ರಗಳು ಈ

ದಿನದಿಂದ 6 ತಿಂಗಳ ಕಾಲ ಅಥವಾ ಯಾವುದೇ ಮೇಲ್ಮನವಿಗೆ ಸಂಬಂಧಿಸಿದಂತೆ ನೋಟಿಸ್ ನೀಡುವವರೆಗೆ ಜಾರಿಯಲ್ಲಿರುತ್ತದೆ.

ಪಿ.ಆರ್.ಸಂಖ್ಯೆ:37/2024 ರಲ್ಲಿರುವ ಐಟಂ ನಂ.1 ದೊಣ್ಣೆ, ಐಟಂ ನಂ.2-ಕಲ್ಲು ಮತ್ತು ಐಟಂ ನಂ.3 ರವಿಕೆ ಬೆಲೆ ಬಾಳದ ವಸ್ತುಗಳಾದ್ದರಿಂದ ಮೇಲ್ಮನವಿಯ ಅವಧಿ ಮುಗಿದ ನಂತರ ನಾಶಪಡಿಸಲು ಕಚೇರಿಗೆ ಆದೇಶಿಸಲಾಗಿದೆ.

(ಶೀಘ್ರಲಿಪಿಗಾರರಿಗೆ ಉಕ್ತಲೇಖವನ್ನು ಕಂಪ್ಯೂಟರ್ ನಲ್ಲಿ ನೇರವಾಗಿ ನೀಡಿ, ಪರೀಕ್ಷಿಸಿ ತಿದ್ದುಪಡಿ ಮಾಡಿ ಬಹಿರಂಗ ನ್ಯಾಯಾಲಯದಲ್ಲಿ ದಿನಾಂಕ 15ನೇ ಏಪ್ರಿಲ್ ಮಾಹೆ 2026 ರಂದು ಘೋಷಿಸಲಾಯಿತು)

Digitally signed by SHWETHA JANARDHAN
Location: I Addl.Civil Judge and JMFC., Periyapatna

**(ಶ್ವೇತ.ಜೆ)**
**1 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರ.ದ.ನ್ಯಾ.ದಂ.,**
**ಪಿರಿಯಾಪಟ್ಟಣ.**

## ಅನುಬಂಧ

**ಅಭಿಯೋಜನೆಯವರ ಪರ ವಿಚಾರಣೆಗೊಳಪಡಿಸಿದ ಸಾಕ್ಷಿದಾರರುಗಳು:**

| | |
|---|---|
| ಪ್ರಾ.ಸಾ.1 | ಸಣ್ಣಮ್ಮ |
| ಪ್ರಾ.ಸಾ.2 | ರಾಜೇಶ್ ಕುಮಾರ್ |
| ಪ್ರಾ.ಸಾ.3 | ಶಿವಪ್ಪ |
| ಪ್ರಾ.ಸಾ.4 | ಮಹದೇವ |
| ಪ್ರಾ.ಸಾ.5 | ಚಿಕ್ಕೇಗೌಡ |
| ಪ್ರಾ.ಸಾ.6 | ಪುಟ್ಟರಾಜು |
| ಪ್ರಾ.ಸಾ.7 | ಡಾ.ಸದಾಶಿವ |

**ಅಭಿಯೋಜನೆಯವರ ಪರ ಗುರುತಿಸಲಾದ ದಾಖಲೆಗಳು:**

| | |
|---|---|
| ನಿಪಿ.1 | ಮಹಜರ್ |
| ನಿಪಿ.1(ಎ) | ಪ್ರಾಸಾ.1 ರವರ ಸಹಿ |
| ನಿಪಿ.1(ಬಿ) | ಪ್ರಾಸಾ.3 ರವರ ಸಹಿ |
| ನಿಪಿ.1(ಸಿ) | ಪ್ರಾಸಾ.4 ರವರ ಸಹಿ |
| ನಿಪಿ.2 | ಪ್ರಾಸಾ.1 ರವರ ಹೇಳಿಕೆ |
| ನಿಪಿ.3 | ಪ್ರಾಸಾ.3 ರವರ ಹೇಳಿಕೆ |
| ನಿಪಿ.4 | ಪ್ರಾಸಾ.4 ರವರ ಹೇಳಿಕೆ |
| ನಿಪಿ.5 | ಚಾಸಾ.5 ರವರ ಹೇಳಿಕೆ |
| ನಿಪಿ.6 | ಚಾಸಾ.4 ರವರ ಹೇಳಿಕೆ |
| ನಿಪಿ.7 | ಗಾಯದ ಪ್ರಮಾಣ ಪತ್ರ |
| ನಿಪಿ.7(ಎ) | ಚಾಸಾ.7 ರವರ ಸಹಿ |

**ಆರೋಪಿಗಳ ಪರ ವಿಚಾರಣೆಗೊಳಪಡಿಸಿದ ಸಾಕ್ಷಿದಾರರು ಮತ್ತು ಗುರುತಿಸಲಾದ ದಾಖಲಾತಿಗಳು:** - ಇಲ್ಲ -

**ಅಭಿಯೋಜನೆಯವರ ಪರ ಗುರುತಿಸಲಾದ ಮುದ್ದೆ ಮಾಲುಗಳು:** - ಇಲ್ಲ -

ಮು ಮಾ 1 - ದೊಣ್ಣೆ, ಕಲ್ಲು ಮತ್ತು ರವಿಕೆ

Digitally signed by SHWETHA JANARDHAN
Location: I Addl.Civil Judge and JMFC., Periyapatna

**(ಶ್ವೇತ.ಜೆ)**

**1 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರ.ದನ್ಯಾ.ದಂ.,**
**ಪಿರಿಯಾಪಟ್ಟಣ.**